**ಸಿ ಸಿ ನಂ. 2028/2024**
**ಪಿ.ಡಬ್ಲ್ಯೂ- 1**

**ಸಾಕ್ಷಿಯು ದಿನಾಂಕಃ** 20-11-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ. ಎಸ್., ವಕೀಲರಿಂದ**

ನಾನು ಈಗಾಗಲೇ ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಸತ್ಯದಿಂದ ಕೂಡಿರುತ್ತವೆ. ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

ದಿಃ **28-12-2023** ರ ಚೆಕ್ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **1** ಎಂದು ಗುರುತಿಸಲಾಯಿತು. ದಿಃ **31-01-2024** ರ ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **2** ಎಂದು ಗುರುತಿಸಲಾಯಿತು. ದಿಃ **16-02-2024** ರಂದು ಆರೋಪಿಗೆ ನೀಡಿರುವ ಲೀಗಲ್ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **3** ಎಂದು ಗುರುತಿಸಲಾಯಿತು. ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **4** ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **5** ಎಂದು ಗುರುತಿಸಲಾಯಿತು. ಅಂಚೆ ಸ್ವಿಕೃತ ಆದ ಬಗ್ಗೆ ಉಪ ಪೋಸ್ಟ್ ಮಾಸ್ಟರ್ ನೀಡಿರುವ ದೃಡೀಕರಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **6** ಎಂದು ಗುರುತಿಸಲಾಯಿತು. ಆರೋಪಿಯ ಸಾಲದ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **7** ಎಂದು ಗುರುತಿಸಲಾಯಿತು. ಪ್ರಕರಣ ನಡೆಸಲು ನನಗೆ ಅಧಿಕಾರ ಇರುವ ಬಗ್ಗೆ ಅಧಿಕಾರ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **8** ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ</u>** ಆರೋಪಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.